**ಕರ್ನಾಟಕ ಸರ್ಕಾರ**

ಸಂ:**DTE-ADMI0EST(10)/14/2022-JD-DEPT TECH**

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ತಾಂತ್ರಿಕ ಭವನ, ಅರಮನೆ ರಸ್ತೆ,
ಬೆಂಗಳೂರು-01, ದಿನಾಂಕ: 23/02/2022

**-: ಸಭಾ ಸೂಚನಾ ಪತ್ರ :-**

ವಿಷಯ: ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ, ಸಹಾಯಕ ಪ್ರಾಧ್ಯಾಪಕರು(ಗ್ರೂಪ್-ಎ), ಸಹಾಯಕ ಪ್ರಾಧ್ಯಾಪಕರು(ಗ್ರೂಪ್-ಬಿ), ಗ್ರಂಥಪಾಲಕರು, ನಿರ್ದೇಶಕರು ದೈಹಿಕ ಶಿಕ್ಷಣ ಇವರಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ ಸ್ಥಾನೀಕರಣ ಮುಂಬಡ್ತಿ ಮತ್ತು ಎ.ಜಿ.ಪಿ.ಮಂಜೂರು ಮಾಡುವ ಸಂಬಂಧ ಸ್ಥಾನೀಕರಣ ಸಮಿತಿ ಸಭೆಯನ್ನು ವಿಸ್ತರಿಸುವುದರ ಬಗ್ಗೆ

ಉಲ್ಲೇಖ:
1. ಈ ಕಛೇರಿ ಜ್ಞಾಪನ ಸಂಖ್ಯೆ: **DTE-ADMI0EST(10)/14/2022-JD-DEPT TECH EDUCATION** ದಿನಾಂಕ:15.02.2022
2. ವಿಷಯ ತಜ್ಞರ ಮನವಿ ಪತ್ರ ದಿನಾಂಕ:23/02/2022

*_***_*

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರು(ಗ್ರೂಪ್-ಎ), ಸಹಾಯಕ ಪ್ರಾಧ್ಯಾಪಕರು(ಗ್ರೂಪ್-ಬಿ), ಗ್ರಂಥಪಾಲಕರು, ನಿರ್ದೇಶಕರು ದೈಹಿಕ ಶಿಕ್ಷಣ ಇವರುಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ ಸೌಲಭ್ಯಗಳನ್ನು ವಿಸ್ತರಿಸಬೇಕಾಗಿರುತ್ತದೆ.

ಎ.ಐ.ಸಿ.ಟಿ.ಇ ವೇತನ ಶ್ರೇಣಿಗಳಲ್ಲಿ ಸರ್ಕಾರಿ/ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿವರ್ಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ (ಉಪನ್ಯಾಸಕರು) ಎ.ಪಿ.ಐ ಅಂಕಗಳ ಆಧಾರಿತ ವೃತ್ತಿ ಪದೋನ್ನತಿ (CAS) ಸೌಲಭ್ಯವನ್ನು ಅನುಷ್ಠಾನಗೊಳಿಸಿ ಆದೇಶಿಸಿರುವುದರಿಂದ ಹಾಗೂ ಎ.ಐ.ಸಿ.ಟಿ.ಇ'ಯು ಕಾಲಕಾಲಕ್ಕೆ ಹೊರಡಿಸಿರುವ ನಿಯಮಾವಳಿಗಳನ್ವಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರು(ಗ್ರೂಪ್-ಎ), ಮತ್ತು (ಗ್ರೂಪ್-ಬಿ), ಗ್ರಂಥಪಾಲಕರು, ನಿರ್ದೇಶಕರು ದೈಹಿಕ ಶಿಕ್ಷಣ ಮತ್ತು ಕ್ರೀಡೆ ಇವರಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ ಸ್ಥಾನೀಕರಣ ಮುಂಬಡ್ತಿ ಮತ್ತು ಎ.ಜಿ.ಪಿ.ಮಂಜೂರು ಮಾಡುವ ಬಗ್ಗೆ ಸಮಿತಿಯ ಸಭೆಯನ್ನು ದಿನಾಂಕ:21/02/2022 ರಿಂದ ದಿನಾಂಕ:23/02/2022ರವರೆಗೆ ಉಲ್ಲೇಖ(1)ರಲ್ಲಿ ಕರೆಯಲಾಗಿತ್ತು.

... ಪುಟ 02ಕ್ಕೆ

ಆದರೆ, ಹಲವಾರು ವಿಷಯ ತಜ್ಞರು, ಹೆಚ್ಚುವರಿ ಕಾಲಾವಕಾಶವನ್ನು ಉಲ್ಲೇಖ(2)ರಲ್ಲಿ ಕೋರಿರುವ ಹಿನ್ನಲೆಯಲ್ಲಿ ಸ್ಥಾನೀಕರಣ ಸಮಿತಿಯು ದಾಖಲೆಗಳನ್ನು ಪರಿಶೀಲಿಸಲು ಮತ್ತು ಎಐಸಿಟಿಇ ನಿಯಮಾವಳಿಗಳನ್ವಯ ಅರ್ಹ ಅಧ್ಯಾಪಕ ವರ್ಗದವರಿಗೆ (ಎಜಿಪಿ 8000 ರಿಂದ 9000 (ಹಂತ 3 ರಿಂದ 4 ) ಮತ್ತು ಎಜಿಪಿ 9000 ರಿಂದ 10000 (ಹಂತ 4 ರಿಂದ 5)) ಆನ್‌ಲೈನ್ ಮುಖಾಂತರ ಸಂದರ್ಶನ ನಡೆಸುವ ಸಲುವಾಗಿ ದಿನಾಂಕ:24/02/2022 ಹಾಗೂ 25/02/2022ರವರೆಗೆ (ಎರಡು ದಿನಗಳು ಸೇರಿ) ಅವಧಿಯನ್ನು ವಿಸ್ತರಿಸಲಾಗಿದೆ. ಸದರಿ ಅವಧಿಯಲ್ಲಿಯೇ ವಿಷಯ ತಜ್ಞರುಗಳು ತಮಗೆ ವಹಿಸಿರುವ ಜವಾಬ್ದಾರಿಯನ್ನು ಪೂರೈಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಮುಂದುವರೆದು, ಸಂಬಂಧಪಟ್ಟ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳು **ದಿನಾಂಕ:25/02/2022ರಂದು ಸಮಯ ಬೆಳಗ್ಗೆ 11:00 ಗಂಟೆಯಿಂದ** ಮೇಲೆ ತಿಳಿಸಿರುವ ಅರ್ಹ ಅಧ್ಯಾಪಕರು ಆನ್‌ಲೈನ್ ಸಂದರ್ಶನಕ್ಕೆ ಹಾಜರಾಗಲು ಸೂಚಿಸಿ ಸೂಕ್ತ ವ್ಯವಸ್ಥೆ ಕಲ್ಪಿಸಲು ಈ ಮೂಲಕ ತಿಳಿಸಲಾಗಿದೆ. ಹಾಗೂ ವಿಭಾಗವಾರು ಪ್ರತ್ಯೇಕ ಗೂಗಲ್ ಲಿಂಕನ್ನು ಪ್ರಾಚಾರ್ಯರುಗಳಿಗೆ ರವಾನಿಸಲಾಗುವುದು.

24/02/2022

ನಿರ್ದೇಶಕರು

ಇವರಿಗೆ,
1)ಸಂಬಂಧಪಟ್ಟ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ
2)ಸಂಬಂಧಪಟ್ಟ ಅರ್ಹ ಅಧ್ಯಾಪಕರುಗಳಿಗೆ ಮಾಹಿತಿಗಾಗಿ
3)ಈ-ಆಡಳಿತ ವಿಭಾಗಕ್ಕೆ (ವೆಬ್‌ಸೈಟ್ ನಲ್ಲಿ ಪ್ರಚುರ ಪಡಿಸಲು)
4)ಎಲ್.ಆರ್.ಡಿ.ಸಿ. ವಿಭಾಗಕ್ಕೆ ಆನ್‌ಲೈನ್ ಲಿಂಕ್ ಸೌಲಭ್ಯ ೊದಗಿಸಲು ಹಾಗೂ ಸಂದರ್ಶನವನ್ನು ಸಂಪೂರ್ಣವಾಗಿ ದಾಖಲಿಸಿ ಗೌಪ್ಯವಾಗಿ ನಿರ್ದೇಶಕರಿಗೆ ಸಲ್ಲಿಸುವುದು
5)ಆಯುಕ್ತರ ಾಪ್ತ ಶಾಖೆಗೆ
6)ನಿರ್ದೇಶಕರ ಾಪ್ತ ಶಾಖೆಗೆ
7)ಕಚೇರಿ ಪ್ರತಿ